ಮೂರನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ,,
ಕನಕಪುರ

ಸಿ.ಸಿ ನಂ.**170/2016**

| **ಚಾಸಾ ಃ** | **1** | **ಪ್ರಾಸಾಃ-** | **1** |
|---|---|---|---|
| ಹೆಸರು | | ಜಯರಾಮು ಎಂ ಪಿ | |
| ತಂದೆಯ ಹೆಸರು | | ಪರ್ವತಯ್ಯ | |
| ವಯಸ್ಸು | | **64** | |
| ಉದ್ಯೋಗ | | ನಿವೃತ್ತ ಜೀವನ | |
| ವಿಳಾಸ | | ಚನ್ನಪಟ್ಟಣ | |

- - - - - - - - - - - - - - - - - - - - - - - - - - - - - -

**ದಿಃ03.09.2024ರಂದು ಸಾಕ್ಷಿಗೆ ಪ್ರಮಾಣ ವಚನ ಬೋದಿಸಲಾಯಿತು.**

ಮುಖ್ಯವಿಚಾರಣೆ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ-

ನಾನು 2013 ರಿಂದ 2016 ರ ವರೆಗೆ ಸಾತನೂರು ಪೊಲೀಸ್ ಠಾಣೆಯಲ್ಲಿ ಪಿಎಸ್‌ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ.12.11.2014 ರಂದು ಮೊ ಸಂಖ್ಯೆ 214/2014 ಹಾಗೂ 236/2014 ರಲ್ಲಿ ಆರೋಪಿಯು ನಾಯಕನಹಳ್ಳಿ ಗ್ರಾಮದಲ್ಲಿ ಇದ್ದ ಮೇರೆಗೆ ಸಿಬ್ಬಂದಿಯೊಂದಿಗೆ ಬೆಳಿಗ್ಗೆ 3ಃ40 ಗಂಟೆ ಸಮಯದಲ್ಲಿ ಕೆಎ-42-ಜಿ-74 ಸರ್ಕಾರಿ ಜೀಪಿನಲ್ಲಿ ಹೊರಟು ನಾಯಕನಹಳ್ಳಿ ಗ್ರಾಮಕ್ಕೆ 4ಃ00 ಗಂಟೆಗೆ ತಲುಪಿ ತಲೆಮರೆಸಿಕೊಂಡ ಆರೋಪಿಯ ಬಗ್ಗೆ ಆತನ ಮನೆಯ ಬಳಿ ಹೋಗಿ ಆತನ ಹೆಸರು ಕರೆಯಲಾಗಿ ಆರೋಪಿ ರಾಜೇಶ್ ಮನೆಯಿಂದ ಹೊರಗೆ ಬಂದಿರತ್ತಾರೆ. ತಕ್ಷಣ ಆತನನ್ನು ಸಿಬ್ಬಂದಿ ಸಹಾಯದಿಂದ ಹಿಡಿದುಕೊಂಡಾಗ ಆತನ ತಂಗಿ ಸವಿತಾ ಒಳಗಿನಿಂದ ಬಂದು ಮತ್ತು ರಾಜೇಶ್ ನ ತಾಯಿ ಮತ್ತು ರಾಜೇಶನ ಹೆಂಡತಿ

ಬಂದು ನಮ್ಮ ರಾಜೇಶನನ್ನು ಏಕೆ ಕರೆದುಕೊಂಡು ಹೋಗುತ್ತಿದ್ದೀರಿ ಎಂದು ಕೇಳಲಾಗಿ ಎರಡು ಪ್ರಕರಣಗಳಲ್ಲಿ ಆರೋಪಿಯಾಗಿದ್ದಾನೆ ಆದ್ದರಿಂದ ದಸ್ತಗಿರಿ ಮಾಡುತ್ತಿದ್ದೇವೆ ಎಂದು ಹೇಳಿದರೂ ಕೇಳದೆ ಸವಿತಾ ರಾಜೇಶನನ್ನು ಬಿಡಿಸಿಕೊಳ್ಳಲು ಪ್ರಯತ್ನಪಟ್ಟು ಪೊಲೀಸರಿಗೆ ಅವಾಚ್ಯ ಶಬ್ದಗಳಿಂದ ಬೈದು, ಸುಮ್ಮ ಸುಮ್ಮನೆ ಕೇಸು ದಾಖಲು ಮಾಡುತ್ತಿದ್ದೀರಿ ಎಂದು ಧಮ್ಕಿ ಹಾಕಿ ದಸ್ತಗಿರಿ ಮಾಡಲು ಅಡ್ಡಿಪಡಿಸಿ ಆರೋಪಿ ರಾಜೇಶ ನಮ್ಮನ್ನು ಬಲವಾಗಿ ತಳ್ಳಿ ಮನೆಯ ಹಿಂಬಾಗಿಲಿನಿಂದ ಓಡಿ ಹೋಗಿರುತ್ತಾನೆ. ಸವಿತಳು ಮನೆಯ ಮುಂದೆ ಜೋರಾಗಿ ಕಿರುಚಿಕೊಂಡು ಆರೋಪಿಯ ದಸ್ತಗಿರಿ ಮಾಡದಂತೆ ಸರ್ಕಾರಿ ಕರ್ತವ್ಯಕ್ಕೆ ಅಡ್ಡಿಪಡಿಸಿದ ಕಾರಣ ಸವಿತ ಮತ್ತು ರಾಜೇಶ್ ರವರ ಮೇಲೆ ಕಾನೂನು ಕ್ರಮ ಜರುಗಿಸುವಂತೆ ಠಾಣೆಗೆ ಬಂದು ಠಾಣಾಧಿಕಾರಿಗಳ ಮುಂದೆ ವರದಿ ನೀಡಿರುತ್ತೇನೆ.

ಸಾಕ್ಷಿಯು ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ಆ ದಿನ ನಮ್ಮ ಸರ್ಕಾರಿ ಕೆಲಸಕ್ಕೆ ಅಡ್ಡಿಪಡಿಸಿದ ಆಸಾಮಿಗಳೇ ಈ ದಿನ ನ್ಯಾಯಾಲಯದ ಮುಂದಿರುವ ಆರೋಪಿತರಾಗಿರುತ್ತಾರೆ.

ಪಾಟೀ ಸವಾಲು ಶ್ರೀ ಬಿ.ಎಲ್.ಎಂ ಆರೋಪಿತರ ಪರ ವಕೀಲರಿಂದಃ-

ನಮ್ಮ ಠಾಣೆಯಿಂದ ನಾಯಕನಹಳ್ಳಿ ಗ್ರಾಮಕ್ಕೆ ಸುಮಾರು 6 ಕೀ.ಮಿ ಅಂತರ ಇರುತ್ತದೆ. ಆ ದಿನ ನನ್ನ ಜೊತೆ ಬಲರಾಮ, ಅಕ್ಬರ್, ಕಾವೇರಪ್ಪ, ಸುಭಾಷ್ ಮತ್ತು ಸಂತೋಷ್ ಬಂದಿರುತ್ತಾರೆ. ಆರೋಪಿಯನ್ನು ಸಿ.ಆರ್ 209/2014 ಮತ್ತು 236/2014 ರ ಪ್ರಕರಣಗಳಲ್ಲಿ ದಸ್ತಗಿರಿ ಮಾಡಲು ಹೋಗಿರುತ್ತೇವೆ. ಆರೋಪಿ ರವರು ಕಿರುಚಿಕೊಂಡಾಗ ಅಕ್ಕಪಕ್ಕದವರು ಯಾರು ಬಂದಿರುವುದಿಲ್ಲ. ನಾನು ಆರೋಪಿಯನ್ನು ದಸ್ತಗಿರಿ ಮಾಡಲು ನಾಯಕನಹಳ್ಳಿ ಗ್ರಾಮಕ್ಕೆ ಹೋಗಿರುವುದಿಲ್ಲ ಎಂದರೆ ಸರಿಯಲ್ಲ. 1 ನೇ ಆರೋಪಿಯು

ನಮಗೆ ಅವಾಚ್ಯ ಶಬ್ದಗಳಿಂದ ಕರ್ತವ್ಯಕ್ಕೆ ಅಡ್ಡಿ ಉಂಟು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಸಿಆರ್ 209/2014 ಮತ್ತು 236/2014 ರ ಪ್ರಕರಣಗಳಲ್ಲಿ 2 ನೇ ಆರೋಪಿಯಾಗಿಲ್ಲದಿದ್ದರೂ ಸಹ ಸುಳ್ಳು ಪ್ರಕರಣ ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಃಇಲ್ಲ**

**(ಸಾಕ್ಷಿಯ ವಿಚಾರಣೆಯನ್ನು ನಾನು ತೆರೆದ ನ್ಯಾಯಾಲಯದಲ್ಲಿ ಪಡೆದುಕೊಂಡಿರುತ್ತೇನೆ ಎಂದು ದೃಡಿಕರೀಸುತ್ತೇನೆ.)**

ಓ ಹೇ ಕೇ ಸರಿ ಇದೆ,

ಮೂರನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್ ಸಿ., ಕನಕಪುರ.